**ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ಸಂಡೂರು**
**ಸಿ.ಸಿ. ನಂ: 528/2015**

| | | | |
|---|---|---|---|
| **ಸಾಕ್ಷಿದಾರರ ಹೆಸರು** | **:** | **ಧನಂಜಯ** | **ಪಿ.ಡಬ್ಲ್ಯೂ-06** |
| **ತಂದೆಯ ಹೆಸರು** | **:** | **ಶಂಕ್ರಣ್ಣ** | **ಸಿ.ಡಬ್ಲ್ಯೂ-12** |
| **ವಯಸ್ಸು** | **:** | **34 ವರ್ಷ** | |
| **ಉದ್ಯೋಗ** | **:** | **ಜೆ.ಎಸ್.ಡಬ್ಲೂ ನಲ್ಲಿ ಕೆಲಸ** | **ಸಾಕ್ಷಿಗೆ ಪ್ರಮಾಣ ವಚನ ಭೋದಿಸಿದ ದಿನಾಂಕಃ 23.06.2026.** |
| **ವಾಸಸ್ಥಳ** | **:** | **ತೋರಣಗಲ್ಲ** | |

**ಸಾಕ್ಷಿಯ ಮುಖ್ಯ ವಿಚಾರಣೆಃ ಸಹಾಯಕ ಸರ್ಕಾರಿ ಅಭಿಯೋಜಕರವರಿಂದಃ**

ನಾನು ನಮ್ಮ ಊರು ತೋರಣಗಲ್ಲನಲ್ಲಿ ಕೆಲಸ ಮುಗಿಸಿಕೊಂಡು ಮನೆಗೆ ಹೋಗಬೇಕಾದರೆ ಪೊಲೀಸ್‌ರು ಅಲ್ಲಿಗೆ ಬಂದು ನನ್ನ ಸಹಿ ಪಡೆದಿರುತ್ತಾರೆ. ನಮ್ಮ ಮನೆಯ ಮುಂದೆ ಕಳ್ಳತನ ಆಗಿರುವ ವಿಚಾರದಲ್ಲಿ ಸಹಿ ಮಾಡು ಎಂದು ಹೇಳಿದಕ್ಕೆ ಸಹಿ ಮಾಡಿರುತ್ತೇನೆ ಎಂದು ನುಡಿಯುತ್ತಾರೆ. ಚಾಸಾ 1 ರವರ ಮನೆಯ ಮುಂದೆ ಮಾಡಿರುವ ಪಂಚನಾಮೆಗೆ ಸಹಿ ಮಾಡಲು ಹೇಳಿದಕ್ಕೆ ಸಹಿ ಮಾಡಿರುತ್ತೇನೆ. ಪಂಚನಾಮೆಯನ್ನು ಸಂಜೆ 6.00 ಗಂಟೆಗೆ ಮಾಡಿರುತ್ತಾರೆ. ಆ ಸಮಯದಲ್ಲಿ ನನ್ನ ಜೊತೆ ಚಾಸಾ 11 ರವರು ಇದ್ದರು. ಸಾಕ್ಷಿಯು ನಿಪಿ 4 ರಲ್ಲಿ ತನ್ನ ಸಹಿಯನ್ನು ನೋಡಿ ಗುರುತಿಸಿದ್ದು, ಅದನ್ನು ನಿಪಿ-4(ಬಿ) ಎಂದು ಗುರುತಿಸಲಾಯಿತು.

**(ಎಪಿಪಿಯವರು ಸಾಕ್ಷಿಯನ್ನು ಭಾಗಶ: ಪ್ರತಿಕೂಲ ಸಾಕ್ಷಿಯಾಗಿ ಪರಿಗಣಿಸಲು ಅನುಮತಿ ಕೋರಿದ್ದರಿಂದ ಅನುಮತಿಯನ್ನು ನೀಡಲಾಯಿತು.)**

**ಪಾಟೀ ಸವಾಲುಃ ಎ.ಪಿ.ಪಿ. ರವರಿಂದಃ**

ದಿಃ 29.01.2015 ರಂದು ನನ್ನನ್ನು ಮತ್ತು ಚಾಸಾ 11 ರವರನ್ನು ಪೊಲೀಸ್‌ರು ಚಾಸಾ1 ರವರ ಮನೆಯ ಹತ್ತಿರ ಪಂಚನಾಮೆಗೆ ಕರೆದಿರುತ್ತಾರೆ ಎಂದರೆ

ಸರಿ. ಆರೋಪಿ ಕಡೆಯಿಂದ ಜಪ್ತು ಪಡೆಸಿಕೊಂಡಿದ್ದ ಮುದ್ದೆ ಮಾಲುಗಳನ್ನು ಪಂಚನಾಮೆಯ ಮೂಲಕ ನನ್ನ ಸಮಕ್ಷಮ ಜಪ್ತು ಪಡೆಸಿಕೊಂಡಿರುತ್ತಾರೆ ಎಂದರೆ ಸರಿಯಲ್ಲ. 1 ಮತ್ತು 2 ನೇ ಆರೋಪಿತರು ದಿಃ05.07.2014 ರಂದು ಚಾಸಾ 1 ರವರ ಮನೆಯಲ್ಲಿ ಕಳ್ಳತನ ಮಾಡಿದ ಸ್ಥಳದಲ್ಲಿ ಪಂಚನಾಮೆ ಮಾಡಿರುತ್ತಾರೆ ಎಂದರೆ ಸಾಕ್ಷಿಯು ಚಾಸಾ 1 ರವರ ಮನೆಯಲ್ಲಿ ಕಳ್ಳತನ ಆಗಿರುವ ವಿಚಾರದಲ್ಲಿ ಪೊಲೀಸ್‌ರು ನನ್ನ ಸಹಿ ಪಡೆದಿರುತ್ತಾರೆ ಎಂದು ನುಡಿಯುತ್ತಾರೆ. ಅದೇ ಸ್ಥಳದಲ್ಲಿ ಸಂಜೆ 5.45 ರಿಂದ 6.45 ರವರೆಗೆ ಪಂಚನಾಮೆ ಮಾಡಿರುತ್ತಾರೆ ಎಂದರೆ ಸರಿ. ಆ ಸಮಯದಲ್ಲಿ 1 ಮತ್ತು 2 ನೇ ಆರೋಪಿತರು ಹಾಜರಿದ್ದರು ಎಂದರೆ ಸರಿಯಲ್ಲ. ನಾನು ಆರೋಪಿತರನ್ನು ನೋಡಿರುವುದಿಲ್ಲ. ನಾನು ಆರೋಪಿತರನ್ನು ನೋಡಿದ್ದರು ಸಹ ನೋಡಿಲ್ಲ ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಪಾಟೀ ಸವಾಲುಃ ಆರೋಪಿ ಪರಃ ಇಲ್ಲ.**

**ಮರು ವಿಚಾರಣೆಃ ಇಲ್ಲ.**

**(ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.)**

**ಓ.ಹೇ.ಕೆ.ಸರಿ.ಇದೆ.**

**ಪ್ರ.ದ.ನ್ಯಾ.ದಂಡಾಧಿಕಾರಿಗಳು,**
**ಸಂಡೂರು.**